ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

...ೇ ವರ್ಷ 4 ನೇ ಸಂಚಿಕೆ ಕೊಪ್ಪ 7-7-19.. ...ಚಾನು...ರ ...ಬೆ 40 ಪೈಸೆ

ಟಿ. ಸಿ. ಗೊಂದಲ: ಪ್ರಿನ್ಸಿಪಾಲ್ ಭರವಸೆ

ಕೊಪ್ಪ: ಎರಡನೇ ಪಿ.ಯು.ಸಿ. ಯಲ್ಲಿ ಮೊದಲ ಸಲ ಪಾಸಾಗದವರಿಗೆ ಟಿ. ಸಿ. ಕೊಡುವಾಗ ಅದರ 10 ನೇ ಕಾಲಂನಲ್ಲಿ 'ಮುಂದಿನ ತರಗತಿಗೆ ಸೇರಲು ಅರ್ಹನೆ?' ಎಂಬಲ್ಲಿ 'ಅನರ್ಹ' ಎಂಬುದಾಗಿ ಇಲ್ಲಿನ ಕಿರಿಯ ಕಾಲೇಜಿನವರು ನಮೂದಿಸುತ್ತಿದ್ದು, ಇದನ್ನು ಸುತ್ತಮುತ್ತಲ ಪ್ರಥಮ ದರ್ಜೆ ಕಾಲೇಜುಗಳವರು ಮಾನ್ಯ ಮಾಡುತ್ತಿಲ್ಲವೆನ್ನಲಾಗಿದೆ.

ಈ ಬಗ್ಗೆ ಪ್ರಿನ್ಸಿಪಾಲರನ್ನು ಭೇಟಿ ಮಾಡಿದ ವಕೀಲ ಶ್ರೀಕಂಠ ಭಟ್, ಭಾರ್ಗವ ಟ್ಯುಟೋರಿಯಲ್ಸ್ ಪ್ರಿನ್ಸಿಪಾಲ್ ಕೆ.ವಿ. ಶಿವಸ್ವಾಮಿ ಮತ್ತು 'ಮುಂಜಾವು' ಸಂಪಾದಕರುಗಳಿಗೆ ಪ್ರಿನ್ಸಿಪಾಲರು ಇದು ನಿಯಮ ಪ್ರಕಾರ ಸರಿಯಾದ ಕ್ರಮವೆಂದು ಸಮರ್ಥನೆ ನೀಡಿದ್ದು, ಈ ಸಂಬಂಧ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯ ನಿವಾರಣೆಗಾಗಿ ಶಿವಸ್ವಾಮಿಯವರ ಸಲಹೆಯೊಂದನ್ನು ಒಪ್ಪಿಕೊಂಡಿದ್ದಾರೆ.

ಅದರಂತೆ, ಟಿ.ಸಿ. ಯಲ್ಲಿ ಮೊದಲನೇ ಪ್ರಯತ್ನದಲ್ಲಿ ಫೇಲಾದ ವಿದ್ಯಾರ್ಥಿಯ ಅನಂತರದ ಅರ್ಹತೆಯನ್ನು ನಮೂದಿಸಲಾಗದು. ಆನೇಲೇನಿದ್ದರೂ ಕಾಲೇಜಿಗಿಂತ ಉನ್ನತ ಅಧಿಕಾರದ ಪಿ.ಯು.ಸಿ. ಮಂಡಳಿ ನೀಡುವ ಅಂಕಪಟ್ಟಿಯೇ ಆತನ ಅರ್ಹತೆಯ ಅಳತೆಗೋಲು. ಈ ವಿವರಣೆಯ ಪತ್ರವನ್ನು ಇಂಥ ವಿದ್ಯಾರ್ಥಿಗಳಿಗೆ ಕೊಡುವ ಟಿ.ಸಿ. ಯ ಜೊತೆಗೆ ನೀಡುವುದಲ್ಲದೆ, ಕೊಪ್ಪ, ಶೃಂಗೇರಿ ಮತ್ತು ತೀರ್ಥಹಳ್ಳಿ ಪ್ರ.ದ. ಕಾಲೇಜುಗಳಿಗೂ ಪತ್ರಮುಖೇನ ತಿಳಿಸಲು ಪ್ರಿನ್ಸಿಪಾಲರು ಒಪ್ಪಿದ್ದಾರೆಂದು ಶಿವಸ್ವಾಮಿ ತಿಳಿಸಿದ್ದಾರೆ.

ಈ ದ್ರಾವಿಡ ಪ್ರಾಣಾಯಾಮದ ಬದಲು ಬೇರೆ ಸರಳ ವಿಧಾನ ಅಥವಾ ಸಾಮಾನ್ಯ ಕ್ರಮವೊಂದನ್ನು ಎಲ್ಲರೂ ಅನುಸರಿಸುದು ಸೂಕ್ತವೆನ್ನಿಸುತ್ತದೆ.

...ಸೌಲಭ್ಯ: ...ಯೋಜನದಾರರನ್ನು ಗುರುತಿಸಲು ಗ್ರಾಮ ಸಭೆ

ಕೊಪ್ಪ: ಇಲ್ಲಿನ ಕ್ಷೇತ್ರಾಭಿವೃದ್ಧಿ ಅಧಿ...ರಿ ಕಚೇರಿಯವರು ಜು. 8 ರಿಂದ 10 ...ಗಳ ಕಾಲ ತಾಲ್ಲೂಕಿನ ಎಲ್ಲಾ ಗ್ರಾಮ... ಪಂಚಾಯ್ತಿ ಕಚೇರಿಗಳಲ್ಲಿ ಗ್ರಾಮ...ಭೆ ಕರೆದು, ಸರ್ಕಾರ ಬಡವರಿಗಾಗಿ ನೀಡು... ಸೌಲಭ್ಯಗಳ ಪ್ರಯೋಜನದಾರರನ್ನು ...ರುತಿಸಲು ಏರ್ಪಾಡು ಮಾಡಿದ್ದಾರೆ. ...500 ರೂ. ಗಿಂತ ಕಡಿಮೆ ವಾರ್ಷಿಕ ಆದಾ...ವಿರುವ ಎಲ್ಲಾ ಕುಟುಂಬಗಳ ಯಜಮಾ...ರು ಆಯಾ ಗ್ರಾಮ ಸಭೆಯಲ್ಲಿ ತಮ್ಮ ...ಸರನ್ನು ನೊಂದಾಯಿಸಿಕೊಳ್ಳಬಹುದೆಂ... ಕ್ಷೇತ್ರಾಭಿವೃದ್ಧಿ ಅಧಿಕಾರಿ ಪಿ. ಬಾಲಪ್ಪ ...ಳಿಸಿದ್ದಾರೆ.

ಕುಸಿಯುತ್ತಿರುವ ರಸ್ತೆ

ಗುಡ್ಡೇತೋಟ: ಇಲ್ಲಿಗೆ ಸಮೀಪದ ತೀ...ಕೆರೆಯ ತಿರುವಿನಲ್ಲಿ ರಸ್ತೆ ಅತಿಯಾಗಿ ...ಸಿಯುತ್ತಿದ್ದು, ಮಳೆಗಾಲದಲ್ಲಿ ವಾಹನ ...ಚಾರಕ್ಕೆ ಅಡಚಣೆಯಾಗಿರುವುದರಿಂದ ...ಬಂಧಪಟ್ಟವರು ಕೂಡಲೇ ಈ ಕಡೆ ಗಮ...ಹರಿಸಿ ದುರಸ್ತಿ ಮಾಡಿಸಬೇಕೆಂದು ಸ್ಥಳೀ...ರು ಒತ್ತಾಯಿಸಿದ್ದಾರೆ.

ತಿದ್ದುಪಡಿ

ಇದೇ ಸಂಚಿಕೆಯ 2 ನೇ ಪುಟದಲ್ಲಿರುವ ...ನದ 3 ನೇ ಪ್ಯಾರಾದಲ್ಲಿ 'ಒಡಲಾಳದ ...ಧನದ....' ಎಂದಿರುವಲ್ಲಿ 'ರೋದನದ' ...ದು ತಿದ್ದಿ ಓದಿಕೊಳ್ಳಿ. — ಸಂ.

ಶೃಂಗೇರಿ ತಾ|| ನಲ್ಲೂರು ಬಳಿ ನೇತುಹಾಕಿದ್ದ ಹೆಣ: ಹತ್ಯೆಯೋ ಆತ್ಮಹತ್ಯೆಯೋ ?

ಶೃಂಗೇ : ಈ ತಾಲ್ಲೂಕಿನ ನೆಲ್ಲೂರಿನ ಬಳಿಯ ಕಾಡಿನಲ್ಲಿ ಮರಕ್ಕೆ ನೇತು ಹಾಕಿದ್ದ ಶವವೊಂದು ಕೆಲ ದಿನಗಳ ಹಿಂದೆ ಪತ್ತೆಯಾಗಿದ್ದು, ಇದು ಕೊಲೆಯಿರಬಹುದೆಂಬ ಊಹಾಪೋಹಕ್ಕೆ ಎಡೆ ಕೊಟ್ಟಿದೆ.

ಒಂದು ಲಂಗಿಯ ತುಂಡು ಮತ್ತು ಕೈ ಚೀಲದ ಹಿಡಿಯ ಸಹಾಯದಿಂದ ನೇತು ಹಾಕಿದ್ದ ಶವ ಕೆಳಗೆ ಬಿದ್ದು ನಾಯಿ-ನರಿ ತಿಂದು ಕೆಲವು ಮೂಳೆ ಮತ್ತಿತರ ಅವಶೇಷಗಳು ಮಾತ್ರ ಸಿಕ್ಕಿದ್ದು ಸತ್ತ ವ್ಯಕ್ತಿಯ ಗುರುತು ಹಿಡಿಯಲಾಗಿಲ್ಲ.

ಅವನದೆನ್ನಲಾದ ಎರಡು ಚೀಲಗಳು, ಕೆಲವು ಬಟ್ಟೆ ಇತ್ಯಾದಿ ದೊರೆತಿದ್ದು, ಪ್ಯಾಂಟೊಂದರಲ್ಲಿ ಚಿತ್ರದುರ್ಗದ ಟೈಲರ್‌ರ ಹೊಲಿಗೆ ಪಟ್ಟಿ ಇದ್ದು, ಅಲ್ಲಿಗೆ ತೆರಳಿದ್ದ ಸಬ್ ಇನ್ಸ್‌ಪೆಕ್ಟರ್ ಎಸ್. ಎಂ. ವೆರ್ಣೇಕರ್ ಅವರಿಗೆ ಯಾವ ಸುಳಿವೂ ಸಿಕ್ಕಿಲ್ಲವೆಂದು 'ಮುಂಜಾವು'ಗೆ ತಿಳಿಸಿದರು.

ಮೃತ ವ್ಯಕ್ತಿಯ ಬೇರೆಲ್ಲ ವಸ್ತುಗಳಿದ್ದೂ ಒಂದು ಪೈಸೆ ಕೂಡ ಹಣ ಇಲ್ಲದಿರುವುದು ಹಾಗೂ ಈ ಪ್ರದೇಶದಲ್ಲಿ ಹುಡುಗಿಯರ ರವಾನೆ ಮತ್ತು ಗಂಧ ಕಳ್ಳಸಾಗಾಣಿಕೆಯ ಕೂಟಗಳು ಇವೆಯೆಂಬ ಸುದ್ದಿಗಳು ಇದೊಂದು ಕೊಲೆಯಿರಬಹುದೆಂಬ ಶಂಕೆಗೆ ಪುಷ್ಟಿ ಕೊಟ್ಟಿವೆ.

ಈ ಪ್ರಕರಣಕ್ಕೂ ಗುಡ್ಡೇತೋಟದಲ್ಲಿ ಕಳೆದ ತಿಂಗಳು ಹಿಡಿಯಲಾದ ಗಂಧದ ಪ್ರಕರಣಕ್ಕೂ ನಂಟು ಹಾಕಬಹುದಾದ ಎಳೆಗಳು ಇವೆಯೆನ್ನಲಾಗಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ.

ತಮ್ಮಂಥದೇ ಒಬ್ಬ ಮನುಷ್ಯನ ಹೆಣವನ್ನು ನಾಯಿ-ನರಿಗಳು ತಿನ್ನುತ್ತಿದ್ದರೂ ಊರವರು ಪೋಲೀಸರಿಗೆ ತಿಳಿಸದಿದ್ದುದಕ್ಕೆ ಅವರ ಬೇಜವಾಬ್ದಾರಿಯೋ, ಪೋಲೀಸರ ಭಯವೋ ಯಾವುದು ಕಾರಣ?

ಉಚಿತ ಪಠ್ಯಪುಸ್ತಕ ವಿತರಣೆ

ಕೊಪ್ಪ: ಇಲ್ಲಿನ ಸಂತ ಜೋಸೆಫ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜೂನ್ 26 ರಂದು ನಡೆದ ವರ್ಣರಂಜಿತ ಸಮಾರಂಭದಲ್ಲಿ ಶಾಲೆಯ ಸುಮಾರು 700 ಮಕ್ಕಳಿಗೆ ಉಚಿತ ಪಠ್ಯಪುಸ್ತಕವನ್ನು ವಿತರಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಸಾ|| ಶಿಕ್ಷಣಾಧಿಕಾರಿ ಹೆಚ್.ಎಂ. ಮಲ್ಲಯ್ಯ ವಹಿಸಿದ್ದು, ಎ.ಬಿ. ವಾಸಪ್ಪ ಗೌಡ ಮುಖ್ಯ ಅತಿಥಿಗಳಾಗಿದ್ದರು. ಶಾಲಾ ತನಿಖಾಧಿಕಾರಿಗಳಾದ ಬಿ.ವಿ. ಶಿವಮೂರ್ತಿ, ಎನ್. ಆರ್. ಶ್ರೀನಿವಾಸ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಇಕ್ಬಾಲ್, ಪುರಸಭಾ ಸದಸ್ಯೆ ಶ್ರೀಮತಿ ಜಾನಕಿ ನಾಗರಾಜ್, ಕೊಪ್ಪ ತಾ|| ಜನತಾ ಕಾರ್ಯದರ್ಶಿ ಕಳಸಪ್ಪ ಇವರುಗಳು ಹಾಜರಿದ್ದರು. ಪೋಷಕರ ಪರವಾಗಿ ಬಿ. ಲಕ್ಷ್ಮೀನಾರಾಯಣ್ ಮಾತನಾಡಿದರು.

ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಜುಲಿಯಾನಾ ರಸ್ಕೀನಾ ಸ್ವಾಗತಿಸಿದರು. ಸಿಸ್ಟರ್ ನೆಲ್ಲಿ ಡಿ'ಸೋಜ ವಂದಿಸಿದರು.

ಜನತಾ ಮುಖಂಡರಿಂದ ಗಂಧ, ನಾಟ ಕಳ್ಳಸಾಗಣೆ?

ಗುಡ್ಡೇತೋಟ: ಇಲ್ಲಿ ಕಳೆದ ತಿಂಗಳು ಕಳ್ಳನಾಟ ಮತ್ತು ಗಂಧ ಸಾಗಣೆಯ ಎರಡು ಪ್ರಕರಣಗಳು ಹಿಡಿಯಲ್ಪಟ್ಟಿದ್ದು, ಗ್ರಾಮದ ಪ್ರಮುಖ ಜನತಾ ಮುಖಂಡರು ಇವುಗಳಲ್ಲಿ ಸಿಕ್ಕಿಕೊಂಡಿರುವುದಾಗಿ ತಿಳಿದು ಬಂದಿದೆ.

...ಲ್ಲಕ ಘಟನೆಗೊಂದು ದೊಡ್ಡ ಗುಲ್ಲು

ಕೊಪ್ಪ: ಇಲ್ಲಿನ ಲೋಕೋಪಯೋಗಿ ...ಾಖೆ ಇಂಜಿನಿಯರ್ ಚಿನ್ನಪ್ಪ ಹೆಗ್ಡೆ ಹಾ... ಸರ್ಕಾರಿ ವೈದ್ಯರಾದ ಡಾ|| ಜಗದೀಶ್ ...ರ ಮೇಲೆ ಹಲ್ಲೆ ನಡೆಯಿತೆಂಬ ಗುಲ್ಲು ...ಲ್ಲಿ ದಟ್ಟವಾಗಿ ಹಬ್ಬಿ, ಶೃಂಗೇರಿ ಮುಂತಾ... ಕಡೆಯೂ ಪ್ರಚಾರ ಪಡೆದಿದೆ.

ಜು. 2 ರ ರಾತ್ರಿ ಗುಣವಂತಿ ಪರಮೇ...ರ ಮತ್ತು ಸಂಗಡಿಗರು ಪ್ರವಾಸಿ ಮಂ...ದಲ್ಲಿ ತಮ್ಮ ಪಾನ ಗೋಷ್ಠಿಯ ನಂತರ ...ಮು ಪಡೆಯುವ ವಿಷಯದಲ್ಲಿ ಪ್ರವಾಸಿ ...ಂದಿರದ ಉಸ್ತುವಾರಿ ಅಧಿಕಾರಿಯಾದ ...ನ್ನಪ್ಪ ಹೆಗ್ಡೆಯವರಿಂದ ಮುಖಭಂಗ ...ಂದಿ ಅದರ ಸೇಡಿಗಾಗಿ ಜು. 3ರ ರಾತ್ರಿ ...ರನ್ನು ಹುಡುಕುತ್ತಿದ್ದಾಗ ಅವರನ್ನು ...|| ಜಗದೀಶ್ ಅಡಗಿಸಿದ್ದಾರೆಂದು ಅನು...ಮಾನಗೊಂಡು ಅವರೊಂದಿಗೂ ವಾಗ್ವಾದ ...ಸಿದರೆಂದೂ, ಸರಿ ರಾತ್ರಿಯಲ್ಲಿ ಗುಂಪು ...ಕೊಂಡು ಹೆಗ್ಡೆಯವರ ಮನೆಗೆ ಹೋ...ಗ ಈ ಎಲ್ಲದರ ಸುಳಿವು ತಿಳಿದಿದ್ದ ನಾರ್ವೆ ದಾಡಪ್ಪಗೌಡರ ಮುನ್ನೆಚ್ಚರಿಕೆಯ ಕ್ರಮದಿಂದಾಗಿ ಏನೂ ಗಲಾಟೆ ಮಾಡದೆ ಹಿಂದಿರುಗಿದರೆಂದೂ ನಮ್ಮ ತನಿಖೆಯಿಂದ ತಿಳಿದುಬಂದಿದೆ.

ಅನಂತರ ತಮ್ಮ ವರ್ತನೆಗೆ ಪರಮೇಶ್ವರ ಮತ್ತು ಸಂಗಡಿಗರು ವ್ಯಥೆ ಪಟ್ಟಿದ್ದು ಈಗ ಎಲ್ಲವೂ ಸೌಹಾರ್ದದಲ್ಲಿ ಮುಕ್ತಾಯಗೊಳ್ಳುವ ಸೂಚನೆ ಕಂಡುಬಂದಿದೆ.

ಆದರೆ ಈ ಘಟನೆಗಳಿಗೆ ಸಮಾನಾಂತರವಾಗಿ ಬೇರೆ ತರದ ಕೆಲವು ಘಟನೆಗಳು, ಶಕ್ತಿಗಳು ಕೆಲಸ ಮಾಡಿದ್ದು ಗುಲ್ಲು ನಾನಾ ರೂಪದಲ್ಲಿ ಹಬ್ಬಲು ಕಾರಣವಾಗಿರುವಂತೆ ಕಂಡುಬರುತ್ತದೆ.

ಇದೊಂದು ಕ್ಷುಲ್ಲಕ ವಿಷಯವಾದರೂ, ಈ 'ಹಿಮ್ಮೇಳ'ದ ಅಬ್ಬರವೇನಾದರೂ ಜಾಸ್ತಿಯಾಗಿ, ಸೌಹಾರ್ದ ಕೆಡುವ ಸೂಚನೆ ಕಂಡಲ್ಲಿ ಮಾತ್ರ 'ಮುಂಜಾವು' ಈ ಹಿಮ್ಮೇಳವನ್ನು ಮುಮ್ಮೇಳಕ್ಕೆ ತರುತ್ತದೆಂದು ಭರವಸೆ ಕೊಡುತ್ತೇವೆ.

ಧನ ಸಹಾಯ ಮಾಡಿ ಒಬ್ಬ ಬಾಲಕಿಯ ಜೀವ ಉಳಿಸಿ

ಕೊಪ್ಪಾ ತಾ|| ಕಮ್ಮರ್ಡಿಯಲ್ಲಿ ಶಿಕ್ಷಕನಾಗಿರುವ ನಾನು ಅಕಾಲಿಕ ಸಾವುಗಳ ಕಾರಣ 4 ಮಕ್ಕಳನ್ನು ಕಳೆದುಕೊಂಡು ಅತಿ ಪ್ರಯಾಸದಿಂದ ಉಳಿಸಿಕೊಂಡ 2 ಮಕ್ಕಳಲ್ಲಿ 16 ವರ್ಷದ ಬಾಲಕಿಯು ರಕ್ತ ಕ್ಯಾನ್ಸರ್‌ಗೆ ತುತ್ತಾಗಿ 1–8–84 ರಿಂದ ನಿರಂತರ ಚಿಕಿತ್ಸೆಯಲ್ಲಿದ್ದಾಳೆ. ಈ ವರೆಗೆ 20,000 ರೂ. ಖರ್ಚು ಮಾಡಿದ್ದು ಈಗ ಯೋಜಿಸಲಾಗಿರುವ ಚಿಕಿತ್ಸೆಗೆ ಇನ್ನೂ 15,000 ರೂ.ಗಳಷ್ಟು ಹಣ ಬೇಕಾಗಿದೆ. ಇದರ ಪ್ರತಿ ರೂಪಾಯಿಯೂ ದಯಾಳುಗಳ ಕೊಡುಗೆಯಿಂದಲೇ ಒದಗಬೇಕಾಗಿದೆ. ಸಹೃದಯಿಗಳಿಂದ ಉದಾರ ನೆರವನ್ನು ಯಾಚಿಸುತ್ತಿದ್ದೇನೆ. ದಯಮಾಡಿ ತಮ್ಮ ನೆರವನ್ನು ನನ್ನ ಮಣಿಪಾಲ ಸಿಂಡಿಕೇಟ್ ಬ್ಯಾಂಕ್ ಬ್ರಾಂಚಿನ ಖಾತೆಗಾಗಲಿ (ಖಾತೆ ಸಂಖ್ಯೆ 3798 /17) ಅಥವಾ ನೇರವಾಗಿ ಈ ವಿಳಾಸಕ್ಕಾಗಲೀ ಕಳಿಸಬೇಕಾಗಿ ವಿನಂತಿ.

ಹೆಚ್. ವಿ. ಲಕ್ಷ್ಮೀನಾರಾಯಣ,

ಕೇರಾಫ್ ಹೆಚ್. ಎಲ್. ಮಮತ, M 2 ವಾರ್ಡ್,

ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲ, ದ.ಕ.

ಬಯಲಾದ ಪರ್ಜನ್ಯ ಜಪ

ಗಾದೆಗಳೆಂದರೆ ಅಗಾಧ ಅನುಭವದ ಗಟ್ಟಿ ಪಾಕ ಎನ್ನುತ್ತಾರೆ. "ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ" ಎಂದು ಮತ್ತೂ ಒಂದು ಗಾದೆಯೇ ಇದೆ.

ಇಂಥ ಅನುಭವ ಭಂಡಾರದ ಒಂದು ಗಾದೆ ಹೇಳುತ್ತದೆ—'ಮಂತ್ರದಿಂದ ಮಾವಿನ ಕಾಯಿ ಉದುರುವುದಿಲ್ಲ' ಎಂದು. ಮಾವಿನಕಾಯಿ ಉದುರಬೇಕಾದರೆ ಇಲ್ಲಾ ಕಲ್ಲಿನಿಂದಲೋ ಒಗೆಯಬೇಕು, ಇಲ್ಲವೇ ಅಂಥ [illegible] ಗಾಳಿ ಬರಬೇಕು. ಮಂತ್ರದಿಂದ ಮಾವಿನಕಾಯಿ ಉದುರಿಸಲು ಹೇಗೆ ಆಗ [illegible] ಕಲ್ಲು ಒಗೆಯಲೂ ಆಗದು, ಗಾಳಿ ಬೀಸಿಸಲೂ ಆಗದು—ಎಂಬ ಪ್ರಜ್ಞೆಯೂ ಈ ಗಾದೆಯಲ್ಲೇ ಅಡಕವಾಗಿದೆ.

ಅಂತೆಯೇ, ಯಾವನಾದರೂ ಮಂತ್ರದಿಂದ 'ಮಾವಿನಕಾಯಿ ಉದುರಿಸುತ್ತೇನೆ' ಎಂದರೆ ಆತ ಸುಳ್ಳ, ಮೋಸಗಾರ ಎಂತಲೂ, ಅಕಸ್ಮಾತ್ ಆತ ಮಾವಿನಕಾಯಿ ಉದುರಿಸಿದ ಹಾಗೆ ಕಾಣಿಸಿದರೆ ಅದು ಕೈಚಳಕ, [illegible] ಎಂತಲೂ ಈ ಗಾದೆಯೇ ಸಾರಿ ಹೇಳುತ್ತಿದೆ.

ಹೀಗೆಯೇ ಮಾವಿನಕಾಯಿ ಉದುರುವಂಥ ಯಾವುದೇ ನಿಸರ್ಗಕ್ರಿಯೆಯನ್ನೂ 'ಮಂತ್ರ'ದಿಂದ ಮಾಡಲು ಆಗುವುದಿಲ್ಲ ಎಂಬುದನ್ನು ಈ ಗಾದೆಯೇ ಹೇಳುತ್ತದೆ. ಅಂದರೆ ಭೂಕಂಪ, ಚಂಡಮಾರುತ, ಮಳೆ, [illegible], ಪ್ರವಾಹ, ಬರಗಾಲ, ರೋಗ ಇತ್ಯಾದಿ [illegible] ಯಾವುದೇ ನಿಸರ್ಗದ ಚಟುವಟಿಕೆಯನ್ನು [illegible] ತಪ್ಪಿಸುವುದಾಗಲೀ ಮಂತ್ರದಿಂದ ಸಾಧ್ಯವಿಲ್ಲ ಎಂಬುದೂ ಈ ಗಾದೆಯೇ ಸಾರುವ ಅನುಭವದ ಪಾಠ.

'ಮಂತ್ರ' ಎಂದಾಗ ಮಂತ್ರ, ಜಪ, [illegible], ಹರಕೆ, ಕಾಣಿಕೆ, ಬಲಿ—ಇತ್ಯಾದಿ [illegible] ಪ್ರಕೃತಿಯ ಕೈಯಲ್ಲಿ ನಮಗೆ [illegible]—ಅದು ತನ್ನ ನಿಯಮ ಪ್ರಕಾರವೇ ತನ್ನ ಕೆಲಸವನ್ನು ನಡೆಸಲು [illegible] ಎಂಬರ್ಥವೂ ಈ ಗಾದೆಯಲ್ಲಿ ಅಡಗಿದೆ.

ಇದು ಅನುಭವ, ಇದು ಸುಸಂಬದ್ಧ ತರ್ಕ. ಇದು ಕಾಮನ್ ಸೆನ್ಸ್ ಕೂಡ.

ಈ ಅನುಭವವನ್ನು, ತರ್ಕವನ್ನು, ಸಾಮಾನ್ಯ ಜ್ಞಾನವನ್ನು ಸುಳ್ಳು ಮಾಡುತ್ತೇನೆಂದು [illegible] ನಡೆಯುತ್ತೇನೆ, ಶೂನ್ಯದಿಂದ ಸೃಷ್ಟಿ ಮಾಡುತ್ತೇನೆ, ಗರ್ಭದಾನ ಮಾಡುತ್ತೇನೆ (!), ಐಶ್ವರ್ಯ ಬರಿಸುತ್ತೇನೆ ಇತ್ಯಾದಿಯಾಗಿ [illegible] ಧೋರಣೆ, [illegible], ಮಹಾ ಪಾತಕಿಗಳು. ಇದನ್ನು [illegible] ಗಾದೆಯಿಂದಲೇ [illegible]

"ಅಬ್ಬಾ, ಧ್ಯಾನ [illegible] ವರುಣ ದೇವರ ಜೊತೆ ಮಾತಾಡಿ, [illegible] ಮಳೆ ಕೊಡುತ್ತೇನೆ [illegible] ಅವನನ್ನು ಬಿಡುತ್ತಾರೆಯೆ!" ಎಂದು ಬಡಬಗ್ಗರು ನಂಬಿ [illegible] ಬಾಲ [illegible] ಇಂಥದೇ ಬಬ್ಬ [illegible] ಎಂಬುದು ಈಗ [illegible] ದೆ. [illegible] ಅಲ್ಲವೇ? ಹಾಗೆಲ್ಲ ತನ್ನ [illegible] ಒಪ್ಪಿಕೊಳ್ಳುತ್ತಾನೆಯೇ?

ಅದಕ್ಕೇ ಈಗ [illegible] ಪ್ರಜಾ [illegible] 30ರ ಪರ್ಜನ್ಯ ಜಪದ ಬಳಿಕ ಜುಲೈ 30 ರೊಳಗೆ ಜಲಾಶಯ ತುಂಬುತ್ತೆಂದು ನಿಮಗೆ ಹೇಳಿದ್ದು ಹೌದು. ಆದರೆ ಆ ನಂತರ ಅದು ಅಷ್ಟು ಬೇಗ ತುಂಬುವುದಿಲ್ಲವೆಂದು ನನಗೆ ಗೊತ್ತಾಯಿತು. ಇದನ್ನು [illegible] ತಿಳಿಸಿದ್ದೆ." ಎಂದು [illegible] ಹೊರಿಸ ಹೋಗಿದ್ದಾನೆ.

[illegible] "ನಾನು ಪ್ರಾರ್ಥನೆ ಮಾಡಿದ್ದೇನೆ. ಎಲ್ಲ ಕಡೆ ಮಳೆ ಆಗಿದೆ. ಇಲ್ಲೂ ಆಗುತ್ತದೆ. ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರು ತರುವ ಪ್ರದೇಶಗಳಲ್ಲಿ ಮಳೆ ಆರಂಭವಾಗಿದೆ. ಅಲ್ಲಿಯ ಕೆರೆ ಕಟ್ಟೆಗಳೆಲ್ಲ ತುಂಬಿ ಜಲಾಶಯಕ್ಕೆ [illegible] ತಡವಾಗಿದೆ ಅಷ್ಟೆ. ಅದರಿಂದ [illegible] ವೇನೂ ಆಗಿಲ್ಲವಲ್ಲ" ಎಂದಿದ್ದಾನೆ. ಜಲಾಶಯದಲ್ಲಿ ಈಗ ಕೇವಲ 7 ಅಡಿ ನೀರಿದ್ದು, ಬೆಂಗಳೂರಿನಲ್ಲಿ ದಿನಕ್ಕೆ ಬಂದು ಹೊತ್ತು ನೀರು ಪೂರೈಸಿದರೂ ಕೇವಲ ಇನ್ನು ಒಂದು ವಾರಕ್ಕೆ ಮಾತ್ರ ಸಾಕಾಗುವಂತಿರುವಾಗ ಈತನಿಗೆ ಇನ್ನೂ "ಅನಾಹುತವೇನೂ ಆಗಿಲ್ಲ"!

"ತಪಸ್ಸು ಮಾಡಿ ಪ್ರಾರ್ಥನೆ ಮಾಡುವುದು ಯೋಗಿಯ ಕೆಲಸ. ಅದೇ ರೀತಿ ಈ ನಗರದ ತಂತ್ರಜ್ಞರೂ ಅವರವರ ಮಾರ್ಗದಲ್ಲಿ ಕೆಲಸ ಮಾಡಬೇಕಿತ್ತು. ಜಲಮಂಡಳಿಯವರು ಬಲ್ಲೆ ಎಂದು [illegible]. ನಮ್ಮ ಆಶ್ರಮ ಟ್ರಸ್ಟ್ ಹೋಗಬಾರದೆಂದು ನಿರ್ಣಯ ಮಾಡಿದರೂ ಜನಹಿತ ಕಾರ್ಯವೆಂದು ಹೋದೆ. ಪ್ರಾರ್ಥನೆ ಮಾಡುವವರಿಗೂ ಈ ಜನ ಇಷ್ಟು ಕಷ್ಟ ಕೊಡುತ್ತಾರಲ್ಲಪ್ಪ" ಎಂದು ಹಲುಬಿದ್ದಾನೆ.

ಖ್ಯಾತ ಮನುಷ್ಯಪ್ರೇಮಿ ವಿಚಾರವಾದಿಯಾದ ಡಾ|| ಹೆಚ್. ನರಸಿಂಹಯ್ಯನವರ ನೆನಪು ಬರುತ್ತೇ [illegible], "ಇದು ಜಾತ್ಯತೀತ ರಾಷ್ಟ್ರ. ಅವರವರ ಪ್ರಾರ್ಥನೆ ಮಾರ್ಗ ಅವರವರಿಗೆ. ಅದನ್ನೊಂದು ವಿವಾದದ ವಿಷಯವನ್ನಾಗಿ [illegible] ಅಧಿಕಾರ ಆಯುಕ್ತನಿಗೆ ಕೊಟ್ಟವರಾರು?" ಎಂದು [illegible] ಕೆಳಗೆ ತೂರಲು ಹವಣಿಸುತ್ತಾನೆ.

"ಇನ್ನು 15 ದಿನದಲ್ಲಿ ಕೆರೆ ತುಂಬೀತೆನ್ನುವ ವಿಶ್ವಾಸವಿದೆ. ಒಂದು ವೇಳೆ [illegible] ನೀರು ಬರಲಿಲ್ಲ ಅನ್ನಿ. ಆಗ ಆಯುಕ್ತ ಏನು ಮಾಡುತ್ತಾರೆ? ನನ್ನ ತಲೆ ತೆಗೆಯುತ್ತಾರಾ?" ಎಂದು ತನ್ನ ಭಂಡತನ ಪ್ರದರ್ಶಿಸಿ [illegible] 'ಮಳೆ ಬಾರದಿದ್ದರೆ ಅದಕ್ಕೂ ನನಗೂ ಸಂಬಂಧವಿಲ್ಲ' ಎಂದು ನಿರ್ಲಜ್ಜನಾಗಿ [illegible] ದ್ದಾನೆ.

"[illegible] ಬೆಂಗಳೂರಿನ [illegible] ಬಂದುಬಿಡುವ [illegible] ಲ್ಲವೆ? ನರಸಿಂಹಯ್ಯ [illegible] ತಪ್ಪು [illegible] ತಲೂ ಹೇಳುತ್ತಾರೆ [illegible] ಉಪಯೋಗ [illegible] ಇದ್ದರೆ ಹೇಗೆ?" ಎಂದು [illegible] ಆತ, "[illegible] ಮಳೆ ಬಂದು ಕೆರೆ ತುಂಬ್ತದೆ ಅಂತ [illegible] ಹೇಳಿದ್ದರು. ಎಲ್ಲಿ ಬಂತು ಮಳೆ?" ಎಂದು ಹಸೀ ಸುಳ್ಳು ಬಿಡುತ್ತಾನೆ.

'ಅದರಮೇಲೆ, "ಅವರು ಬಾಯಿ ಮುಚ್ಚಿಕೊಂಡಿದ್ದರೆ [illegible] ಜಲಾಶಯಕ್ಕೆ ನೀರೇ [illegible] ಆಗೇನು ಮಾಡ್ತಾರೆ!' ಎಂದು ಧರ್ಮಾನ್ಯ [illegible] ರುವ [illegible] ಕೋಪ [illegible] ಸುತ್ತಾನೆ.

[illegible] ಎಲ್ಲದಕ್ಕೂ [illegible] ಈತನು ಕೊಚ್ಚಿಕೊಳ್ಳುವುದು [illegible] "ನನಗೆ [illegible] ಅಂತಃ ಮಾತ್ರ [illegible] ದ್ದಾರೆ. [illegible]!

ಈ [illegible] ಯಲಿ. ಈಗ ಇಲ್ಲ. ನಿಮ್ಮ [illegible] ಪ್ರಶ್ನೆ

ಪದ್ಯದಂಕಣ

ತರತರವಾಗಿ ತೆರೆ

ತೆರೆಗಳು—
ಸ್ವಪ್ನಲೋಕ ಸೃಷ್ಟಿಸುವ
ನಿಶೆಯಲ್ಲಿ ಮೈ ಮರೆಸುವ
ಸುಂದರ ಭಾವನೆಗಳು

ತೆರೆಗಳು—
ಕಟ್ಟಿ ಹಾಕಲ್ಪಟ್ಟ
ಕನಸಿನೋಟದ ಕುದುರೆಗಳು
ಅಂತರಾಳದ
ವಿಕ್ಷಿಪ್ತ ಸ್ಪಂದನಗಳು

ತೆರೆಗಳು—
ಹುಚ್ಚೆದ್ದ ಕಾಮದ
ಉದ್ರಿಕ್ತ ರೂಪಗಳು
ಒಡಲಾಳದ ಶೋಧನದ
ಪ್ರತಿಧ್ವನಿಗಳು

ತೆರೆಗಳು—
ಬದುಕಿನ ಬಗೆಹರಿಯದ
ನಿರಂತರ ಪ್ರಶ್ನೆಗಳು
ಸಮುದ್ರದ
ಜೋಡದ
ನೆನಪುಗಳು!

—ಹುಮಾಶ್ರೀ, ಕಾರವಾರ.

ಗಳವೆಯಲ್ಲ, ಅವನ್ನು ಹೇಳಿ. ಮುಖ್ಯವಾಗಿ ವಿಚಾರವಾದಿಗಳು ಈ ಜಪ, [illegible] ವನ್ನೆಲ್ಲ ಯಾಕೆ ವಿರೋಧಿಸುತ್ತಾರೆ? ಈ ಪ್ರಶ್ನೆಗೆ ಉತ್ತರವನ್ನು ಈಗಾಗಲೇ ಹಲವು ವಿಚಾರವಾದಿಗಳು ಕೊಟ್ಟಿದ್ದಾರೆ. ಅದರೆ [illegible] 'ಜಾಣರು' ಅವನ್ನು [illegible], ಮತ್ತೆ ಮತ್ತೆ ಕೇಳುತ್ತಲೇ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ.

ಜಪ, [illegible] ನಿಮ್ಮ [illegible] ಮನೆಯೊಳಗೆ ಮಾಡಿಕೊಂಡರೆ [illegible] ಕೇಳಲು ಬರುವುದಿಲ್ಲ. ಇದನ್ನೆಲ್ಲ ಸಾರ್ವಜನಿಕವಾಗಿ ದೊಡ್ಡ ಧರ್ಮಕಾರ್ಯ [illegible] ಅಥವಾ ಸರ್ಕಾರಿ [illegible] ಮಾಡಿದಾಗಲೇ ವಿಚಾರವಾದಿಗಳು ವಿರೋಧಿಸುವುದೂ [illegible] ಸಾರ್ವಜನಿಕರ [illegible] ಅಲ್ಲ. (ಹೇಗೂ ಇದರಲ್ಲಿ ಸಾರ್ವಜನಿಕರ ಹಣ [illegible] ಇಲ್ಲ. ಎಲ್ಲ ದಾನಿಗಳು 'ಸ್ವ ಇಚ್ಛೆ'ಯಿಂದ ನೀಡಿದ್ದು ಎಂದು ಸಮರ್ಥಿಸುತ್ತಾರೆ!)

ಅದಕ್ಕಿಂತ ಮುಖ್ಯವಾಗಿ [illegible] ಗಳು [illegible] ಮತ್ತು [illegible] ಅಜ್ಞಾನ, [illegible] ಮತ್ತು [illegible] ಗಳ [illegible] ಬಗ್ಗೆ ನಿಜವಾದ [illegible] ಎಲ್ಲಾ ವಿಚಾರವಂತರೂ [illegible] ತ್ತಾರೆ.

ಏಕೆಂದರೆ ಇಂದು ನಮ್ಮ [illegible] ಹಲ [illegible] ಜನಸಾಮಾನ್ಯರು [illegible] ಅಜ್ಞಾನದಿಂದ [illegible] ತ್ತಾರೆ, [illegible] ದ [illegible] ನಿಂದ ಬಡಬಗ್ಗರು. ಜನಸಾಮಾನ್ಯ

(ಮೂರನೆ ಪುಟಕ್ಕೆ)

ಶೃಂಗೇರಿಯಲ್ಲೂ ಒಮ್ಮೆ ವಿಫಲವಾಗಿತ್ತು

ಬೃಹತ್ ಪರ್ಜನ್ಯ ಜಪ

[illegible] 1 ವಾರ [illegible], 2 ವಾರ [illegible]. [illegible]

[illegible] 11 [illegible]

[illegible]

— ಇದು [illegible]!

...ದುಗರ ಪತ್ರಗಳು

ಯಾಕೆ ಈ ಗದಾಪ್ರಹಾರ?

ಸ್ವಾಮ್ಯರೆ,

ನಿಮ್ಮ 23.6.85 ರ ಸಂಚಿಕೆಯಲ್ಲಿ ಕೊಪ್ಪ ಪುರಸಭೆ ಬಾಡಿಗೆದಾರರಹಗರಣ ಓದಿದೆ.

'ವ್ಯಾಪಾರೋ ದ್ರೋಹ ಚಿಂತನಂ' ಎಂಬ ಸೂಕ್ತಿಯೇ ಇದೆ. ಹಣ ಹೇಗೇ ಮಾಡಿರಲಿ, ಅದು ಅತಿ ಹಿರಿಯ ಗುಣವಾಗಿರುವ ನಮ್ಮ ಸಮಾಜದಲ್ಲಿ ಕಾನೂನಿಂದ ಸ್ಟೇ, ಅಡ್ಜರ್ನ್‌ಮೆಂಟ್ ಎಂಬ ಮಹಾ 'ಬ್ಲಾಕ್ ಹೋಲ್' ನಿಂದ, ಎಲ್ಲ 10 ಅಂಗಡಿಗಳವರೂ ಸೇರಿದ ಬಹುಮತ ಎಂಬ ಪ್ರಬಲ ನ್ಯಾಯದಿಂದ ನಾಲ್ಕು ಕಾಸು ಮಾಡಿಕೊಳ್ಳಲು ಬಯಸಿದ ಪ್ರಾಮಾಣಿಕ ನಡವಳಿಕೆಯ ಮೇಲೆ ಯಾಕೆ ಸ್ವಾಮಿ ನಿಮ್ಮ ಗದಾಪ್ರಹಾರ?

ಕಾನೂನನ್ನು, ನ್ಯಾಯವನ್ನು ತಮ್ಮ ಶಕ್ತಿಯಿಂದ, ಹಣದಿಂದ ಬಗ್ಗಿಸದೆ ಇರುವವರು ಯಾರಾದರೂ ಗಣ್ಯರಾಗಲು ಸಾಧ್ಯವೆ ಸ್ವಾಮಿ ಈ ಕಲಿಯುಗದಲ್ಲಿ? ಮನುಷ್ಯತ್ವ ಇರುವವರು ಖಾಲಿ ಮನುಷ್ಯರಾದಾರು, ಗಣ್ಯರಾಗುವುದಿಲ್ಲ ಎಂಬುದು ಚಿಕ್ಕ ಮಕ್ಕಳಿಗೂ ಗೊತ್ತು.

ಇನ್ನಾದರೂ ಈ ರೀತಿಯ ಪೇಪರು ಬಾಂಬುಗಳನ್ನು ಎಸೆದೀರಿ, ಎಚ್ಚರ.

—ಪಾಂಡುರಂಗ ವಿಠಲ, ಮೈಸೂರು.

(ಈ ಸಹಿಯ ಜತೆ ಇನ್ನೂ ನೂರಾರು ಸಹಿಗಳನ್ನು ನಿರೀಕ್ಷಿಸಲಾಗಿದೆ!)

ಬಂದೂಕು ನವೀಕರಣ: ಡಿ. ಸಿ. ಪ್ರಕಟಣೆ

(ನಮ್ಮ 23–6–85 ರ ಸಂಚಿಕೆಯಲ್ಲಿ ಪ್ರಕಟವಾದ "ಕೋವಿ ಲೈಸೆನ್ಸ್ ನವೀಕರಣಕ್ಕೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಯಾರ ಕೈವಾಡ?" ಎಂಬ ವರದಿಗೆ ಉತ್ತರವಾಗಿ ಜಿಲ್ಲಾಧಿಕಾರಿಗಳು ಕಳಿಸಿರುವ ಪ್ರಕಟಣೆ ಹೀಗಿದೆ:)

ವಿಷಯ: ಬಂದೂಕು ನವೀಕರಣದ ಬಗ್ಗೆ.

ದಿನಾಂಕ 23.6.85 ರ 'ಮುಂಜಾವು' ವಾರಪತ್ರಿಕೆಯಲ್ಲಿ ಬಂದೂಕು ಪರವಾನಗಿ ನವೀಕರಣದ ಬಗ್ಗೆ ಪ್ರಕಟಿಸಿರುವುದನ್ನು ಪರಿಶೀಲಿಸಲಾಯಿತು. ಆ ರೀತಿಯಾಗಿರುವ ಸಂದರ್ಭದಲ್ಲಿ ಸ್ಪಷ್ಟ ಪ್ರಕರಣಗಳನ್ನು ನನಗೆ ತಿಳಿಸಿದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ನಮ್ಮ ಕಛೇರಿಯಲ್ಲಿ ಟೋಕನ್ ಜಾರಿಗೆ ತಂದಿದ್ದು, ಪರವಾನಗಿಗಳನ್ನು ನವೀಕರಣದ ಬಗ್ಗೆ ಹಾಜರುಪಡಿಸಿದ ದಿನಾಂಕದಂದೇ ನವೀಕರಿಸಿ ಕೊಡಲಾಗುತ್ತಿದೆ. ಆ ರೀತಿ ಆಗದೆ ತಡ ಆದ ಸಂದರ್ಭದಲ್ಲಿ ನನ್ನ ಗಮನಕ್ಕೆ ತಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಆಯುಧ ಕಾಯಿದೆ ನಿಯಮಗಳು 1962 ನಿಯಮ 52ರ ಪ್ರಕಾರ ಬಂದೂಕು ಪರವಾನಗಿ ಹೊಂದಿದವರು ನಿಗದಿಪಡಿಸಿದ ಅವಧಿಯೊಳಗೆ ಬಂದೂಕನ್ನು ಪರವಾನಗಿ ನೀಡಿಕೆ ಅಧಿಕಾರಿಗಳಿಗೆ ಪರಿಶೀಲನೆ ಬಗ್ಗೆ ಹಾಜರುಪಡಿಸಬೇಕಾಗಿರುತ್ತೆ. ಆದ್ದರಿಂದ ನಾನು ದಿನಾಂಕ: 22.7.85 ರಂದು ಕೊಪ್ಪ ತಾಲ್ಲೂಕು ಕಛೇರಿಗೆ ಬರಲಿರುವುದರಿಂದ, ಈ ಕಛೇರಿಯಿಂದ ಬಂದೂಕು ಪರವಾನಗಿ ಹೊಂದಿದ್ದು ಬಂದೂಕನ್ನು ಹಾಜರುಪಡಿಸದೆ ಇರುವವರು ಆ ದಿನಸ ಬಂದೂಕನ್ನು ಮತ್ತು ಅದನ್ನು ಪಡೆದ ದಾಖಲಾತಿಗಳೊಡನೆ ಪರಿಶೀಲನೆ ಬಗ್ಗೆ ಕೊಪ್ಪ ತಾಲ್ಲೂಕು ಕಚೇರಿಯಲ್ಲಿ ಹಾಜರುಪಡಿಸಬಹುದಾಗಿದೆ.

ಈ ಅವಕಾಶವನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಬೇಕಾಗಿ ಕೋರಿದೆ.

(ಸಹಿ) **(ಬಿ. ಪಾರ್ಥಸಾರಥಿ),**
ಜಿಲ್ಲಾ ದಂಡಾಧಿಕಾರಿಗಳು,
ಚಿಕ್ಕಮಗಳೂರು ಜಿಲ್ಲೆ.

ಮಲೆನಾಡಿನಲ್ಲಿ ಅರಣ್ಯ ಸಂರಕ್ಷಣೆ, ಅಭಿವೃದ್ಧಿ ಕುರಿತು ಟಿ.ವಿ.ಎನ್. ಹೇರಳೆಯವರ ಲೇಖನದ 2 ನೇ ಭಾಗ ಈ ಸಲ ಸ್ಥಳಾಭಾವದಿಂದಾಗಿ ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುತ್ತದೆ. —ಸಂ.

"ಕಟ್ಟುಕತೆಯಿಂದ ಮೋಸಹೋಗದಿರಿ"

ಸ್ವಾಮ್ಯರೆ,

ಆಚಾರ್ಯ ಚಿತ್ರಕಲಾಭವನದ ವಿದ್ಯಾರ್ಥಿಗಳು ಕರ್ನಾಟಕದ ಎಲ್ಲಾ ಊರುಗಳಲ್ಲಿದ್ದಾರೆ. 18–20 ವಯಸ್ಸಿನ ಯುವಕನೊಬ್ಬನು ನಮ್ಮ ಅನೇಕ ವಿದ್ಯಾರ್ಥಿಗಳ ವಿಳಾಸಗಳನ್ನು ಸಂಗ್ರಹಿಸಿ ಅವರಲ್ಲಿಗೆ ಹೋಗಿ ನಮ್ಮ ಭವನದ ವಿದ್ಯಾರ್ಥಿಯೆಂದು ಸುಳ್ಳು ಹೇಳಿಕೊಂಡು ಕಟ್ಟುಕತೆಗಳನ್ನು ಹೇಳಿ ಹಣ ಸಂಗ್ರಹಿಸುತ್ತಿರುವುದು ತಿಳಿದುಬಂದಿದೆ. ಈ ಬಗ್ಗೆ ಭವನದ ವಿದ್ಯಾರ್ಥಿಗಳು, ಸಾರ್ವಜನಿಕರು ಎಚ್ಚರವಹಿಸಬೇಕಾಗಿ ಈ ಮೂಲಕ ತಿಳಿಸಲಿಚ್ಛಿಸುತ್ತೇನೆ.

ಎಂ.ಟಿ.ವಿ. ಆಚಾರ್ಯ,
ಪ್ರಿನ್ಸಿಪಾಲ್,
ಆಚಾರ್ಯ ಚಿತ್ರಕಲಾಭವನ
ಬೆಂಗಳೂರು–9

ವಿಶಿಷ್ಟ ಬಗೆಯ ವೈದ್ಯ ಸಲಹಾ ಕೇಂದ್ರ

ನಮ್ಮ ದೇಶದಲ್ಲಿ ಚಿಕಿತ್ಸಾ ಸೌಲಭ್ಯಗಳು ಬಹಳ ಹೀನಸ್ಥಿತಿಯಲ್ಲಿವೆ. ಅಸಂಖ್ಯ ಹಳ್ಳಿಗಳು ಈ ಸೇವೆಯಿಂದ ವಂಚಿತವಾಗಿವೆ. ಒಂದು ಸಾಧಾರಣ ಔಷಧೋಪಚಾರಕ್ಕೂ ಹತ್ತಿಪ್ಪತ್ತು ಮೈಲು ಹೋಗಬೇಕಾದ ಪರಿಸ್ಥಿತಿಯಿದೆ. ಹೀಗಿರುವಾಗ, ಕಾಯಿಲೆಗಳಿಗೆ ಆಯಾ ಕಾಯಿಲೆಯ ವಿಶೇಷ ತಜ್ಞರಾದ ವೈದ್ಯರಿಂದ ಸಲಹೆ, ಚಿಕಿತ್ಸೆ ಪಡೆಯುವ ಮಾತಂತೂ ದೂರವೇ ಉಳಿಯಿತು. ಅದಕ್ಕಾಗಿ ಜಿಲ್ಲಾ ಕೇಂದ್ರಕ್ಕೋ, ಬೆಂಗಳೂರಿಗೋ, ಯಾವುದೋ ಸ್ಥಳಕ್ಕೋ ಹೋಗಬೇಕು.

ಈ ಅವ್ಯವಸ್ಥೆಯಿಂದ ನೊಂದಿರುವ ಶೃಂಗೇರಿ ಹಾಗೂ ಆಸುಪಾಸಿನ ಜನಗಳಿಗೆ ಆಶಾಕಿರಣವಾಗಿ ಶೃಂಗೇರಿಯಲ್ಲಿ 'ರತ್ನ ಮಂಜರಿ

(ನಾಲ್ಕನೆ ಪುಟಕ್ಕೆ)

ಬಯಲಾದ ಪರ್ಜನ್ಯ ಜಪ

(...ಎರಡನೇ ಪುಟದಿಂದ)

...ಸ್ತಿ, ಅಧಿಕಾರ, ಉದ್ಯೋಗಗಳಿಂದ ವಂ...ಕಾಗಿ ಉಳ್ಳವರ ವಾಕ್ಯಕ್ಕೆ ಬೀಳುತ್ತ... ಉಳ್ಳವರ, ಜಾಣರ ವರ್ಗ ಮತ್ತು ಅವ... ಹಿತಗಳ ಪ್ರತಿಪಾದನೆಗಾಗಿರುವ ರಾಜ...ರಣಿಗಳು ಈ ದಾಸರನ್ನು ಮತ್ತಷ್ಟು ...ಜ್ಞಾನದಲ್ಲೇ ಇಟ್ಟು, ತಮ್ಮ ಪಗಡೆಯಾಟ... ಕಾಯಿಗಳಾಗಿ ಮಾಡಿಕೊಳ್ಳುತ್ತಾರೆ. ...ಗಡೆ ಆಡುವವನ ಅದೃಷ್ಟ ಕೆಟ್ಟದಿದ್ದರೆ ...ಡೆಸಿಕೊಳ್ಳುವವೂ ಕಾಯಿಗಳೇ. ಅವನ ...ದೃಷ್ಟ ಚೆನ್ನಾಗಿದ್ದು ಕಾಯಿಗಳು ಗೆದ್ದರೂ ...ವನು–ಪ್ರತಿಫಲ ಪಡೆಯುವವನು–ಮಾ... ಆಡಿದವನೇ. ಪಗಡೆಕಾಯಿ ಅಂದರೆ ...ಗೆ.)

...ಹೀಗೆ ದಾಸ್ಯಕ್ಕೊಳಪಟ್ಟು ಅವಕಾಶ...ಂದ ದೂರವಾಗುತ್ತ ಅಜ್ಞಾನದ ಕತ್ತ...ಲು ಮತ್ತಷ್ಟು ಆಳಕ್ಕೆ ಹೋದಂತೆ ಇವ...ಹಸಿವಿನಿಂದ ಸಾಯುತ್ತಾರೆ, ರೋಗ...ನ ಬಂದಾಗ ಚಿಕಿತ್ಸೆ ಪಡೆಯುವ ಪ್ರ...ಯಾಗಲಿ ಸಾಮರ್ಥ್ಯವಾಗಲಿ ಇಲ್ಲದೆ ...ದೈವಕ್ಕೆ ಶರಣಾಗುತ್ತಾರೆ–ತಾವೂ ಸತ್ತು ...**ಮಿಲೆಯನ್ನೂ ಹಬ್ಬಿಸುತ್ತಾರೆ;** ಜನ...ಸಂಖ್ಯಾ ನಿಯಂತ್ರಣ ಮುಂತಾದ ಸುಧಾ...ರಣೆಗಳಿಗೆ ಒಪ್ಪದೆ ತಾವೂ ಮತ್ತಷ್ಟು ಕಷ್ಟ...ಪಡಿಕೊಳ್ಳುತ್ತಾರೆ, **ದೇಶದ ಕಲ್ಯಾಣ ...ಯೋಜನೆಗಳೂ ನೀರಲ್ಲಿ ಹೋಮ...ವಾಗುವಂತೆ** ಮಾಡುತ್ತಾರೆ; ಏಳಿಗೆಯ ...ಪುಟ್ಟ ಅವಕಾಶ ಸಿಕ್ಕಾಗಲೂ ಸ್ವಪ್ರಯತ್ನದಿಂದ ರೂಢಿಸದೆ ಪರಾವಲಂಬಿಗಳಾಗಿ ಸಮಾಜಕ್ಕೆ ಶಾಶ್ವತವಾಗಿ ಭಾರವಾಗುತ್ತಾರೆ.

ಜೊತೆಗೆ ವರದಕ್ಷಿಣೆ, ಜಾತಿಭೇದಗಳಂಥ ಅನಿಷ್ಟಗಳಾಗಲಿ, ಹರಕೆ, ಯಾತ್ರೆಗಳಾಗಲಿ ನಿಂತಿರುವುದೂ ಅಜ್ಞಾನದ ತಳಹದಿಯ ಮೇಲೆ. ಉಳ್ಳವರ ವರ್ಗಕ್ಕೆ ವರದಕ್ಷಿಣೆ ಅನಿಷ್ಟವಲ್ಲ, ಒಂದು ಪ್ರತಿಷ್ಠೆಯ ಚಿಹ್ನೆ; ಯಾತ್ರೆ ಒಂದು ಸಂತೋಷ. ಜಾತಿ ಭೇದ ಇವರನ್ನು ಹಿಂಸಿಸುವುದಿಲ್ಲ. ಇವೆಲ್ಲವುಗಳಿಂದ ಹಿಂಸೆಗೆ ಒಳಗಾಗುವವರು ಬಡಬಗ್ಗರು, ಸಾಮಾನ್ಯ ಜನ. ಉತ್ಸಾಹದ, ನಲಿವಿನ ಹಬ್ಬಗಳೂ ಹೊರೆ, ದುಃಸ್ವಪ್ನ ಆಗುವ ಜನ ಎಲ್ಲಾದರೂ ಇದ್ದರೆ ಅದು ನಮ್ಮ ದೇಶದಂಥ ಕಡೆ ಮಾತ್ರ! ಕ್ಷಾಮ, ಮಳೆ, ಬಿಸಿಲು–ಮುಂತಾದ ಸಣ್ಣ ಪುಟ್ಟ ನೈಸರ್ಗಿಕ ಏರುಪೇರಿಗೂ ಹುಳುಗಳಂತೆ ಸತ್ತು ಉದುರುವವರು, ಭೂಕಂಪ, ಭೋಪಾಲ, ಚಂಡಮಾರುತಗಳಿಂದ ಲಕ್ಷಗಟ್ಟಲೆಯಲ್ಲಿ ನಿರ್ನಾಮವಾಗಿ ಇನ್ನು ಲಕ್ಷಗಟ್ಟಲೆಯವರನ್ನು ಶೋಕಿಸಲು ಬಿಟ್ಟುಹೋಗುವವರು ಇವರೇ.

ಇವರೆಲ್ಲ ನಮ್ಮಿಂದ ಬೇರೆಯಲ್ಲ, ನಮ್ಮವರೇ, ಮನುಷ್ಯರೇ–ಎಂದು ವಿಚಾರವಾದಿಗಳು ನಿಷ್ಕಲ್ಮಷವಾಗಿ ಯೋಚಿಸುವುದರಿಂದಲೇ ಅವರಿಗೆ ಅಜ್ಞಾನ, ಮೌಢ್ಯಗಳ ವಿರುದ್ಧ ತೀವ್ರವಾಗಿ ಕೋಪ ಬರುತ್ತದೆ. ಅದು 'ಸಂಭಾವಿತನ ಕೋಪ'

ಪ್ರಕೃತಿಯ ಪ್ರತಿಯೊಂದು ವಸ್ತುವಿಗೂ ನಿರ್ದಿಷ್ಟವಾದ ಗುಣಲಕ್ಷಣಗಳಿವೆ (ಪ್ರಾಪರ್ಟೀಸ್.) ಪ್ರಕೃತಿಯ ಪ್ರತಿಯೊಂದು ಕ್ರಿಯೆಗೂ ನಿರ್ದಿಷ್ಟವಾದ ನಿಯಮಗಳಿವೆ. ಆ ನಿಯಮಗಳ ಹೊರತಾಗಿ ಆ ಕ್ರಿಯೆ ನಡೆಯದು. ಆ ನಿಯಮಗಳು ಪೂರ್ಣಗೊಂಡಾಗ ಆ ಕ್ರಿಯೆಯನ್ನು ತಡೆಯಲೂ ಆಗದು. ಇಂಥಿಂಥ ಪರಿಸ್ಥಿತಿಯಲ್ಲಿ ಹೀಗೆ-ಹೀಗೆ ಆಗುತ್ತದೆ ಎಂದರೆ ಆ ಪರಿಸ್ಥಿತಿಗಳು ಪೂರ್ಣವಾಗಿದ್ದಾಗ ಮಾತ್ರ ಹಾಗೆ ಆಗುತ್ತದೆ ಮತ್ತು ಆಗ ಹಾಗೆ ಆಗಿಯೇ ಆಗುತ್ತದೆ. ಮಳೆ, ಬೆಳೆ, ಬೆಂಕಿ, ಭೂಕಂಪ, ಪ್ರವಾಹ, ಕ್ಷಾಮ, ರೋಗ–ರುಜಿನ ಇತ್ಯಾದಿ ಎಲ್ಲವೂ ಇಂಥ ನಿಯಮಗಳಿಗೊಳಪಟ್ಟೇ ನಡೆಯುತ್ತವೆ.

ಈ ನಿಯಮಗಳನ್ನು ಅರಿಯದಿದ್ದಾಗ ಮನುಷ್ಯ, ಪ್ರಕೃತಿಯ ಆ ಕ್ರಿಯೆಗಳಿಗೆ ಭಯಪಡುತ್ತಾನೆ, ಅವುಗಳ ಅಂಕೆಗೊಳಪಡುತ್ತಾನೆ. ಆದರೆ ಅವನ್ನೆಲ್ಲ ಸುಸಂಬದ್ಧವಾಗಿ ಅರ್ಥಮಾಡಿಕೊಳ್ಳುತ್ತಿರುವ ವಿಜ್ಞಾನ, ಅವುಗಳನ್ನು ಇಡೀ ಮನುಷ್ಯ ಕುಲದ ಉಪಯೋಗಕ್ಕೆ ಆಗುವಂತೆ ಮಾರ್ಪಡಿಸುತ್ತಿದೆ; ಅವುಗಳಿಂದಾಗುವ ಕೆಡುಕನ್ನು ನಿವಾರಿಸಲು ಬೇಕಾದ ಕ್ರಮಗಳನ್ನು ಕಂಡು ಹಿಡಿಯುತ್ತಿದೆ; ಸಾಧ್ಯವೇ ಇಲ್ಲದಿದ್ದ ಪಕ್ಷದಲ್ಲಿ ಆ ಕೆಡುಕುಗಳ ಬಗ್ಗೆ ಮುನ್ನೆಚ್ಚರಿಕೆ ಮತ್ತು ರಕ್ಷಣೆಯ ಕ್ರಮಗಳನ್ನು ರೂಪಿಸುತ್ತಿದೆ. ಈ ರೀತಿಯಲ್ಲಿ ಈಗಾಗಲೇ ಪ್ರಕೃತಿಯಿಂದ ಅತ್ಯಂತ ಪ್ರಯೋಜನ ಪಡೆಯಲು ಪ್ರಕೃತಿಯ ಬಹುಪಾಲು ತೊಂದರೆಗಳನ್ನು ನಿವಾರಿಸಲು ಅಥವಾ ಅವುಗಳಿಂದ ಸಕಾಲದಲ್ಲಿ ರಕ್ಷಣೆ ಪಡೆಯಲು ಸಾಧ್ಯವಾಗಿದೆ.

ಆದರೆ ಎಲ್ಲ ಜನಸಾಮಾನ್ಯರೂ ಈ ಉಪಯೋಗ ಅಥವಾ ರಕ್ಷಣೆಗಳನ್ನು ಪಡೆಯಬೇಕಾದರೆ ಪ್ರಕೃತಿಯ ಬಗ್ಗೆ ಅವರ ಗಮನ ತಿರುಗಬೇಕು ಹಾಗೂ ಆ ಬಗೆಗಿನ ಮೌಢ್ಯ ಹೋಗಬೇಕು.

ಆದರೆ ಈ ಕರ್ಮಗಳು ಪ್ರಕೃತಿಯ ಬಗೆಗೆ ಅವರ ಜ್ಞಾನವನ್ನು ಹೆಚ್ಚಿಸುವ ಬದಲು ಭ್ರಮೆಯನ್ನು ಹಬ್ಬಿಸುತ್ತವೆ; ಮನುಷ್ಯನ ಸ್ವಪ್ರಯತ್ನವನ್ನು ನಿಗ್ರಹಿಸುತ್ತವೆ, ಸಮಸ್ಯೆಗಳಿಗೆ ಅವನು ಸ್ವಂತ ಯೋಚನೆಯಿಂದ ಕಾರಣ ಹುಡುಕಿ ಪರಿಹಾರವನ್ನು ಕಂಡು ಹಿಡಿಯುವ ಚಿಂತನ ಕ್ರಮವನ್ನು ಬುಡಮೇಲಾಗಿಸುತ್ತವೆ.

(ನಾಲ್ಕನೇ ಪುಟಕ್ಕೆ)

ಬಯಲಾದ ಪರ್ಜನ್ಯ ಜಪ

(ಮೂರನೆ ಪುಟದಿಂದ)

ಈ ಚಿಂತನೆಯಿಂದ ವಿಮುಖತೆ ಅಥವಾ ಬುದ್ಧಿಯ ದಾರಿದ್ರ್ಯವೇ ಇಂದು ನಮ್ಮ ದೇಶದಂಥಾ ಹಲವಾರು ಕಡೆ ಒಂದು ಸಣ್ಣ ಜನವರ್ಗ ಆಗಲೇ 21 ನೇ ಶತಮಾನಕ್ಕೆ ಹಾರಲು ಸಿದ್ಧವಾಗಿದ್ದರೆ ಉಳಿದ ಬಹು ಸಂಖ್ಯಾತರು ಇನ್ನೂ ಕ್ರಿಸ್ತಪೂರ್ವದಲ್ಲೇ ಇರುವ ಅಥವಾ 20 ನೇ ಶತಮಾನಕ್ಕೆ ಬಂದಿದ್ದವರೂ ಕ್ರಿಸ್ತ ಪೂರ್ವದ ಕಡೆ ಜಾರುತ್ತಿರುವ ಕ್ರೂರ ಪರಿಸ್ಥಿತಿಗೆ ಕಾರಣವಾಗಿದೆ. ಸರ್ವಾಧಿಕಾರ, ವಂಶಾಧಿಕಾರ, ಗೂಂಡಾಧಿಕಾರಗಳಿಗೂ ಈ ಮೌಢ್ಯ, ಅಜ್ಞಾನಗಳೇ ಕಾರಣ. ಏಕೆಂದರೆ ಮೌಢ್ಯದಿಂದ ಜನ ತಮ್ಮ ತಮ್ಮಲ್ಲೇ ಕಿತ್ತಾಡುತ್ತಾರೆ. ಆದರಿಂದ ಬಿಡುಗಡೆ ಪಡೆದಾಗ ಮಾತ್ರ ಅವರು ಸರಿಯಾಗಿ ಸಂಘಟಿತರಾಗಿ ಕ್ರೌರ್ಯವನ್ನೆದುರಿಸಲು ಸಮರ್ಥರಾಗುತ್ತಾರೆ.

ಈ ಶಿವಬಾಲಯೋಗಿಗಳು, ಸಾಯಿಬಾಬಾಗಳು ಮತ್ತು ಇಹವನ್ನು ಕಡೆಗಣಿಸಿ 'ಪರ'ಕ್ಕೆ ಜನರ ಬುದ್ಧಿಯನ್ನು ಜೋತುಬೀಳಿಸುವ ಎಲ್ಲರು, ಹಾಗೂ ಇವರ ಏಜೆಂಟರುಗಳಾದ ಮಂತ್ರಿ ಲಕ್ಷ್ಮೀಸಾಗರ್, ಜಲಮಂಡಳಿಯ ಅಧ್ಯಕ್ಷ, ಮುಖ್ಯ ಇಂಜಿನಿಯರ್‌ಗಳು ಮುಂತಾದ (ಒಬ್ಬ ಪ್ರೊಫೆಸರ್, ಒಬ್ಬ ಐ.ಎ.ಎಸ್., ಒಬ್ಬ ಇಂಜಿನಿಯರ್) ದೊಡ್ಡ ದೊಡ್ಡ ವಿದ್ಯಾವಂತರು—ಇವರೆಲ್ಲರ ಒಂದು ಇವರೆಲ್ಲ ಎಂಥ ಧೂರ್ತರು, ಮನುಷ್ಯ ಕುಲದ ಎಂಥ ದ್ರೋಹಿಗಳು ಎಂದು ಯೋಚಿಸಿ.

ಜನಸಾಮಾನ್ಯರ ಬುದ್ಧಿಯ ಮೇಲೆ ನಡೆಸುವ ಇಂಥ ಕ್ರೌರ್ಯವನ್ನು ನಮ್ಮ ಧರ್ಮ, 'ಬುಡಕಟ್ಟು' ಬಹುಸಂಖ್ಯಾತ ಭಾರತೀಯ ಬಡವರ-ಜನಸಾಮಾನ್ಯರ ಇಡೀ 'ಜನಾಂಗ'ವನ್ನು ಕತ್ತಲಲ್ಲಿ ಅದುಮಿ ಹಿಡಿಯಲು ಹವಣಿಸುತ್ತಿದೆ. ಇದಕ್ಕೆ 'ಪ್ರಖ್ಯಾತ' ಕರ್ನಾಟಕ ಸರ್ಕಾರದ ಮೌನದ ಕುಮ್ಮಕ್ಕು. ಸಂಸ್ಕೃತಿ ಎಂದು ವೈಭವೀಕರಿಸಿ ಮುಗ್ಧರನ್ನು ವಶೀಕರಿಸುವವರಿದ್ದಾರಲ್ಲ, ಸುತ್ತ ಮುತ್ತಲ ಮುಗ್ಧ ಕೂಲಿಕಾರರನ್ನು ಮೇಯಿಲು ಬಾಳಗಡಿಯ ಗುಡ್ಡದಲ್ಲಿ 'ಉದ್ಭವಿಸಿದ' 'ದೇವರೂ' ಇವರಿಗೆ ಧರ್ಮ ಬೆಳೆಯುತ್ತಿರುವುದರ ಒಂದು ಉದಾಹರಣೆಯಾಗುತ್ತದಲ್ಲ—ಅಂಥ ಜನಗಳೂ ಈ ಮೇಲೆ ಹೇಳಿದ ಬುಡಕಟ್ಟಿಗೇ ಸೇರಿದ್ದಾರೆ, ಎಚ್ಚರವಿರಲಿ!

ನಮ್ಮ ನಿಮ್ಮ ಧರ್ಮ ಆದಿಯಲ್ಲಿ ಶುದ್ಧ ವಿಚಾರ ಪರತೆಯನ್ನು, ಮನುಷ್ಯ ಪ್ರೇಮವನ್ನು ಪ್ರತಿಪಾದಿಸಿದರೂ ಅನಂತರದ ಕಾಲದಲ್ಲಿ ಮೌಢ್ಯವನ್ನು, ಕ್ರೌರ್ಯವನ್ನು 'ಧರ್ಮ'ವೆಂದು ಸಾರಿದ್ದು ಈ ಬುಡಕಟ್ಟಿನವರೇ. ಗೊತ್ತಿರಲಿ.

ನೀವು ಧರ್ಮದಿಂದ ನಡೆದುಕೊಂಡರೆ ವಿಚಾರವಾದಿಗಳು ವಿರೋಧಿಸುವುದಿಲ್ಲ, ಗೌರವಿಸುತ್ತಾರೆ. ಆದರೆ ಮೌಢ್ಯ, ಅಜ್ಞಾನ ಧರ್ಮವಲ್ಲ. 'ಮಂತ್ರದಿಂದ ಮಾವಿನಕಾಯಿ ಉದುರುವುದಿಲ್ಲ' ಎಂದು ಸಾರಿರುವವರು ನಮ್ಮ-ನಿಮ್ಮ ಅನುಭವಿ ಪೂರ್ವಿಕರೇ ಹೊರತು (ಈಗಿನ) ವಿಚಾರವಾದಿಗಳಲ್ಲ. ಪೂರ್ವಿಕರ ಅನುಭವದ ಉಪದೇಶವನ್ನು ಅರ್ಥ ಮಾಡಿಕೊಂಡರೆ ವಿಚಾರವಾದಿಗಳೂ ಅರ್ಥವಾಗುತ್ತಾರೆ. —ಸಂಪಾದಕ.

ವೈದ್ಯ ಸಲಹಾ ಕೇಂದ್ರ

(ಮೂರನೆ ಪುಟದಿಂದ)

ವೈದ್ಯಸಲಹಾ ಕೇಂದ್ರ' ಎಂಬ ಸಂಸ್ಥೆಯೊಂದು ಪ್ರಾರಂಭವಾಗಿದೆ.

ಈ ಸಲಹಾ ಕೇಂದ್ರವು ಉನ್ನತವಾದ ಪರಿಣತಿ ಪಡೆದ ವೈದ್ಯರ ತಂಡವೊಂದನ್ನು ಪ್ರತಿ ತಿಂಗಳ ಮೂರನೆ ಭಾನುವಾರ ಶೃಂಗೇರಿಗೆ ಕರೆತರುತ್ತದೆ.

ಈ ತಂಡದಲ್ಲಿ ಸಾಮಾನ್ಯ ಕಾಯಿಲೆಗಳಲ್ಲದೆ, ಚರ್ಮರೋಗ, ಸ್ತ್ರೀರೋಗ, ಕಣ್ಣು, ಕಿವಿ-ಮೂಗು-ಗಂಟಲು, ಹೃದ್ರೋಗ, ಮೂಳೆ, ಹಲ್ಲು ಮುಂತಾದ ಎಲ್ಲಾ ರೋಗಗಳ ತಜ್ಞರು ಮತ್ತು ಮಕ್ಕಳ ತಜ್ಞರು ಇರುತ್ತಾರೆ. ಇವರುಗಳಿಂದ ಒಮ್ಮೆ ಪರೀಕ್ಷಿಸಿ ಸಲಹೆ ಪಡೆಯಲು 15 ರೂ. ಶುಲ್ಕವಿದೆ. ನಂತರದ ಪ್ರತೀ ಭೇಟಿಗೆ 10 ರೂ. ಆಗುತ್ತದೆ. (ಬೇರೆ ದೂರದ ಊರಿಗೆ ಹೋಗುವುದಕ್ಕಿಂತ ಹತ್ತಿರದಲ್ಲೇ ಇರುವ ಈ ಸಲಹಾ ಕೇಂದ್ರಕ್ಕೆ ಈ ಶುಲ್ಕ ಕೊಡುವುದು ದುಬಾರಿಯಾಗಲಾರದು.)

ಈ ಖಾಸಗೀ ಸಲಹಾ ಕೇಂದ್ರದ ಸಂಘಟಕರು ಶೃಂಗೇರಿಯ ಪ್ರಸಿದ್ಧ ಎಂ.ಆರ್. ಕ್ಲಿನಿಕ್‌ನ ಡಾ॥ ಎಲ್. ಎಂ. ಭಟ್. ಮುಂದೆ ಇಲ್ಲೇ ವಾರ್ಡ್ ಸೌಲಭ್ಯವನ್ನೂ ಕಲ್ಪಿಸಬೇಕೆಂಬ ಯೋಜನೆ ಸಂಘಟಕರಿಗಿದೆ. ಸದ್ಯ ಈ ಸಲಹಾ ಕೇಂದ್ರದಿಂದ ಜನ ಪಡೆಯುವ ಪ್ರಯೋಜನ ಮತ್ತು ಅವರು ನೀಡುವ ಪ್ರೋತ್ಸಾಹವನ್ನು ಮುಂದಿನ ಯೋಜನೆ ಅವಲಂಬಿಸಿರುತ್ತದೆ.

—ರಮೇಶ್ ಎಸ್.ವಿ. ಬೇಗಾರು.

ವಾಣಿಜ್ಯ ಪರೀಕ್ಷೆ ಫಲಿತಾಂಶಗಳು

ಬಸರಿಕಟ್ಟೆ

ಇಲ್ಲಿನ ಶ್ರೀ ಕೃಷ್ಣಾ ವಾಣಿಜ್ಯ ವಿದ್ಯಾಶಾಲೆ ಕಳೆದ ಮೇ ತಿಂಗಳಲ್ಲಿ ನಡೆದ ವಾಣಿಜ್ಯ ಪರೀಕ್ಷೆಗಳಲ್ಲಿ ಶೇ. 50 ಫಲಿತಾಂಶ ಪಡೆದಿದೆ.

ಜಯಪುರ

ಇಲ್ಲಿನ ಶ್ರೀ ವಾಣಿಜ್ಯ ವಿದ್ಯಾ ಶಾಲೆ ಕಳೆದ ಮೇ ತಿಂಗಳ ವಾಣಿಜ್ಯ ಪರೀಕ್ಷೆಗಳಲ್ಲಿ ಸರಾಸರಿ ಶೇ. 69.4 ರಷ್ಟು ಫಲಿತಾಂಶ ಪಡೆದಿದೆ.

ಪುರಸಭಾ ಕಾರ್ಯಾಲಯ,
ಕೊಪ್ಪ, ದಿನಾಂಕ: 27-6-1985,
ಚಿಕ್ಕಮಗಳೂರು ಜಿಲ್ಲೆ.

ಕೊಪ್ಪ ಬಸ್ ನಿಲ್ದಾಣದ ಹತ್ತಿರ ಇರುವ ಪುರಸಭೆಗೆ ಸೇರಿದ 10 ಅಂಗಡಿ ಮಳಿಗೆಗಳಲ್ಲಿ ವ್ಯಾಪಾರ ಮಾಡುವ ಹಕ್ಕಿನ

ಆಕ್ಷನ್ ನೋಟಿಫಿಕೇಶನ್

ನೋಟಿಫಿಕೇಶನ್ ನಂ. ಹೆಚ್‌ಸಿ.ಪಿ.ಆರ್: 85-86: 27-6-1985.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಪುರಸಭೆಗೆ ಸೇರಿದ ಬಸ್ ನಿಲ್ದಾಣದ ಹತ್ತಿರ ಇರುವ 10 ಅಂಗಡಿ ಮಳಿಗೆಗಳಲ್ಲಿ 1-8-85 ರಿಂದ 31-7-1990 ರ ವರೆಗೆ ವ್ಯಾಪಾರ ಮಾಡುವ ಲೈಸೆನ್ಸ್‌ಹಕ್ಕನ್ನು ದಿನಾಂಕ: 28-7-85 ರಂದು ಬೆಳಗ್ಗೆ 11-00 ಗಂಟೆಗೆ ಪುರಸಭಾ ಕಾರ್ಯಾಲಯದಲ್ಲಿ ಬಹಿರಂಗವಾಗಿ ಹರಾಜು ಮೂಲಕ, ಪುರಸಭೆಯ ಅಧ್ಯಕ್ಷರು ಯಾ ಮುಖ್ಯಾಧಿಕಾರಿಯವರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಿಲೇವಾರಿ ಮಾಡಲಾಗುವುದು. ಇಚ್ಛೆಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು.

ಷರತ್ತುಗಳು:

1) ಲೈಸೆನ್ಸ್ ಹಕ್ಕನ್ನು ಪಡೆಯಲು ಹರಾಜಿನಲ್ಲಿ ಭಾಗವಹಿಸುವವರು ಬಿಡ್ ಮಾಡುವುದಕ್ಕೆ ಮುಂಚೆ 10,000-00 ರೂ. ಡಿಪಾಜಿಟ್ ಮಾಡಬೇಕು.

2) ಪುರಸಭೆಗೆ ಬಾಕಿದಾರರಾಗಿರುವವರು ಬಿಡ್‌ನಲ್ಲಿ ಭಾಗವಹಿಸಲು ಅನರ್ಹರಾಗಿರುತ್ತಾರೆ.

3) ಅಖೈರು ಬಿಡ್‌ದಾರರು (1000-00) ಹತ್ತು ಸಾವಿರ ರೂ. ಗಳ ಡಿಪಾಜಿಟ್ಟನ್ನು ಹರಾಜು ಕೈದಾದ ಕೂಡಲೇ ಕಟ್ಟಿ ರಶೀದಿ ಪಡೆಯತಕ್ಕದ್ದು.

4) ಉಳಿದ ಷರತ್ತು ಮತ್ತು ವಿವರಗಳನ್ನು ಈ ಕಾರ್ಯಾಲಯದಿಂದ ದಿನಾಂಕ: 27-6-85 ರಂದು ಹೊರಡಿಸಿರುವ ನೋಟಿಫಿಕೇಶನ್ ಕರಪತ್ರದಲ್ಲಿ, ಹಾಗೂ ಪುರಸಭಾ ಕಾರ್ಯಾಲಯದಲ್ಲಿ ಪಡೆಯಬಹುದು.

(ಸಹಿ)
ಕೆ. ವಿ. ಮಂಜುನಾಥ ಶೆಟ್ಟಿ,
ಅಧ್ಯಕ್ಷರು, ಪುರಸಭೆ
ಕೊಪ್ಪ.

(ಸಹಿ)
ಆರ್. ಗುಂಡೂರಾವ್
ಪುರಸಭಾ ಮುಖ್ಯಾಧಿಕಾರಿಗಳು
ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.